ಶ್ರೀ ಪೆರಿಕಲ್ ಎಂ. ಮಲ್ಲಪ್ಪ —ತಾಳೆ ಎಣ್ಣೆ ನೀವು ಸರಬರಾಜು ಮಾಡುವುದು ಒಂದು ಲೀಟರ್‌ಗೆ ೧೨ ರೂ. ೫೦ ಪೈಸೆ. ಆದರೆ ಬ್ಲಾಕ್ ಮಾರ್ಕೆಟ್‌ನಲ್ಲಿ ೨೫ ರೂಪಾಯಿಗೆ ಒಂದು ಲೀಟರ್ ಹೋಗುತ್ತಿದೆ. ತಮ್ಮ ಇನ್‌ಸ್ಪೆಕ್ಟರ್‌ಗಳು ಹೋಗಿ ರೇಷನ್ ಕಾರ್ಡ್‌ಗಳನ್ನು ವೇರಿಫೈ ಮಾಡುವುದಿಲ್ಲ. ಎಷ್ಟು ರೇಷನ್ ಶಾಪ್‌ಗಳಲ್ಲಿ ಪಾಮ್ ಆಯಿಲ್ ಎಷ್ಟು ಜನ ಕಾರ್ಡ್ ಹೋಲ್ಡರ್ಸ್‌ಗೆ ಕೊಡುತ್ತಿದ್ದಾರೆ ಎಂಬುದನ್ನು ವೇರಿಫೈ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೊರುತ್ತೇನೆ.

SRI AZIZ SAIT.—I will get it verified, not only verified but I will see that such places are raided by the Vigilance Cell of our Food Department. Moreover, I would take this opportunity to request the people not to stick to one type of oil ie., palm oil which becomes scarce. There are substitutes available like groundnut oil, sunflower oil, etc. If this is done than what is called the demand for a particular brand will subsidise.

ಕಬಿನಿ ಜಲಾಶಯದಿಂದ ತಾರಕಾ ಜಲಾಶಯಕ್ಕೆ ಏತ ನೀರಾವರಿ ಕುರಿತು

೧೦೪೫. ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಕಬಿನಿ ಜಲಾಶಯದಿಂದ ತಾರಕಾ ಜಲಾಶಯಕ್ಕೆ ಏತ ನೀರಾವರಿ ಮಾಡಲು ಸರ್ಕಾರದ ಉದ್ದೇಶವಿದೆಯೇ ?

(ಆ) ಹಾಗಿದ್ದಲ್ಲಿ, ಕಬಿನಿ ಜಲಾಶಯದಿಂದ ತಾರಕಾ ಜಲಾಶಯಕ್ಕೆ ಏತ ನೀರಾವರಿ ಮಾಡಲು ಎಷ್ಟು ಹಣ ಖರ್ಚಾಗುತ್ತದೆ ?

(ಇ) ಕಬಿನಿ ಜಲಾಶಯದಿಂದ ತಾರಕಾ ಜಲಾಶಯಕ್ಕೆ ಏತ ನೀರಾವರಿ ಮಾಡಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು)—

(ಅ) ಇಲ್ಲ.

(ಆ) ಮೇಲಿನ ಉತ್ತರ ೧ರಲ್ಲಿ ತಿಳಿಸಿರುವಂತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ಕಬಿನಿ ಜಲಾಶಯದಿಂದ ತಾರಕ ಜಲಾಶಯಕ್ಕೆ ಏತ ನೀರಾವರಿ ಮಾಡಲು ಸರ್ಕಾರದ ಉದ್ದೇಶವಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಆ ಉದ್ದೇಶವಿಲ್ಲ ಎಂದು ಹೇಳಿದ್ದಾರೆ. ಈ ತಾರಕ ಏತ ನೀರಾವರಿಗೆ ಈಗಾಗಲೇ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಜಲಾಶಯಕ್ಕೆ ಮಳೆ ಬಾರದೆ ನೀರು ಇಲ್ಲ. ಆದಕ್ಕೆ ಕಬಿನಿ ಜಲಾಶಯದಿಂದ ಏತ ನೀರಾವರಿ ಮಾಡಿದರೆ ಸುಮಾರು ೨೮ ಸಾವಿರ ಎಕರೆ ನೀರಾವರಿಯಾಗುತ್ತದೆ. ಆ ತಾಲ್ಲೂಕಿನ ಜನ ಅನೇಕ ಸಾರಿ ಬಂದು ಮನವಿ ಸಹ ನೀಡಿದ್ದಾರೆ. ಅಲ್ಲಿ ಸುಮಾರು ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕು. ಅಲ್ಲಿಗೆ ೨ ಟಿ.ಎಂ.ಸಿ ನೀರು ಬಂದರೆ ಸುಮಾರು ೨೮ ಸಾವಿರ ಎಕರೆ ನೀರಾವರಿ ಆಗುತ್ತದೆ. ಆದರೆ ಇದನ್ನು ಬಿಟ್ಟು ಕಬಿನಿ ಎಂಡನೇ ಹೊತ ಸಹ ೨೦೦ ಕೋಟಿ ಖರ್ಚು ಮಾಡಿ ಪ್ರಾರಂಭ ಮಾಡುತ್ತಾರೆಂದು ನಾನು ಕೇಳಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ತಾರಕ ಜಲಾಶಯದ ಬಗ್ಗೆ ಏನು ಹೇಳುತ್ತಾರೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ತಾರಕ ಯೋಜನೆಯನ್ನು ಲೇಕಡ ೫೦ ಪರ್ಸೆಂಟ್ ರಿಪಂಡಬಿಲಿಟಿ ಆಧಾರದ ಮೇಲೆ ಮಾಡಿದ್ದಾರೆ. ಇತ್ತೀಚೆಗೆ ಮಳೆ ಇಲ್ಲದೆ ಇರುವ ಕಾರಣ ಈ ಪ್ರಾಜೆಕ್ಟ್‌ನಲ್ಲಿ ನೀರು ಸಾಕಷ್ಟು ಬರುತ್ತಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ. ಇದರಿಂದ ಈ ಯೋಜನೆ ಮೂಲಕ ಎಷ್ಟು ಆಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸಬೇಕಾಗಿತ್ತೋ ಅಷ್ಟು ಪ್ರದೇಶಕ್ಕೆ ನೀರನ್ನು ಒದಗಿಸುವುದಕ್ಕೆ ಆಗಲಿಲ್ಲ. ಆದರೆ ಸನ್ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಕಬಿನಿ ಜಲಾಶಯದಿಂದ ಏತ ನೀರಾವರಿ ಮೂಲಕ ತಾರಕ ಜಲಾಶಯಕ್ಕೆ ನೀರು ಬಿಟ್ಟು ಅಲ್ಲಿನ ಆಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸಿ ಎಂದು ಹೇಳುತ್ತಿದ್ದಾರೆ. ಅವರು ಸಲಹೆ ಕೊಟ್ಟಿದ್ದಾರೆ.

ಆದರೆ ಇದುವರೆಗೆ ಸರ್ಕಾರದಲ್ಲಿ ಅಂತಹ ಯಾವುದೇ ಒಂದು ಪ್ರಸ್ತಾವನೆ ಇಲ್ಲ. ಈಗ ಇರತಕ್ಕಂಥ ಜಲಾಶಯಕ್ಕೆ ನಾವು ಏನು ಹಣ ಹೂಡಿದ್ದೇವೆ, ಹಣ ವ್ಯರ್ಥವಾಗಬಾರದೆಂದು ಅವರು ಕೊಟ್ಟಿರತಕ್ಕಂಥ ಸಲಹೆ ಸಾಧುವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ದಿಸೆಯಲ್ಲಿ ಪರಿಶೀಲನೆ ಮಾಡಿ ಎಂದು ನಾನಂ ನನ್ನ ಇಲಾಖಾಧಿಕಾರಿಗಳಿಗೆ ಸೂಕ್ತ ಆದೇಶ ಕೊಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಒಂದು ಮಾತ ಹೇಳುತ್ತೇನೆ. ಕಬಿನಿ ಜಲಾಶಯದಿಂದ ತಾರಕ ಏತ ನೀರಾವರಿ ಯೋಜನೆಯನ್ನು ಮಾಡಿಕೊಡದಿದ್ದರೆ ಕಬಿನಿ ಎರಡನೇ ಹಂತ ಏನು ಮಾಡಲು ಸರ್ಕಾರ ಹೊರಟಿದೆಯೋ, ಆ ಯೋಜನೆಯನ್ನು ಮಾಡಲಂ ಆ ತಾಲ್ಲೂಕಿನ ಜನ ಬಿಡುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಮಗೆ ಹೇಳಲಂ ಇಚ್ಛೆಪಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಇದು ಸರಿಯಾದ ಮಾರ್ಗ ಅಲ್ಲ. ಸರ್ಕಾರ ಯಾವುದೇ ಯೋಜನೆಯನ್ನು ಮಾಡಬೇಕಾದರೂ ಕೂಡ ಕೆಲವೊಂದು ವಿಷಯಗಳನ್ನು ಕೆಲವೊಂದು ಸಾಧ್ಯತೆಗಳನ್ನು ಪರಿಶೀಲನೆ ಮಾಡಿ, ಸಾಧ್ಯತೆಗಳಿದ್ದರೆ ಮಾತ್ರ ಮಾಡಬೇಕೇ ವಿನಹ ರಾಜಕೀಯ ಒತ್ತಡಕ್ಕೆ ಮಣಿದಂ ಮಾಡತಕ್ಕಂಥಾದ್ದು ಸರ್ಕಾರದ ಕೆಲಸ ಅಲ್ಲವೆಂದು ನಾನು ಈ ಮೂಲಕ ಸ್ಪಷ್ಟವಾಗಿ ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಒಂದು ವೇಳೆ ಅದು ಸಾಧುವಲ್ಲವೆಂದು ಕಂಡುಬಂದರೆ ಆ ಕೆಲಸವನ್ನು ಸರ್ಕಾರ ಮಾಡುವುದಕ್ಕೆ ಹೋಗುವುದಿಲ್ಲ. ಸಾಧುವೆಂದ ಸರ್ಕಾರಕ್ಕೆ ಕಂಡುಬಂದರೆ ಸರ್ಕಾರವೇ ಆ ಕೆಲಸವನ್ನು ಮೇಲೆತ್ತಿಕೊಂಡು ಮಾಡಂತ್ತದೆ. ಆದರೆ ಕಬಿನಿ ಎರಡನೇ ಹಂತವನ್ನು ರಾಜಕೀಯಕ್ಕಾಗಿ ಮಾಡುತ್ತೇವೆ ಎನ್ನುವ ವಾದ ಸರಿಯಾದಂದು ಅಲ್ಲವೆಂದು ನಾನಂ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ತಾರಕ ಯೋಜನೆ ಬಗ್ಗೆ ನಮ್ಮ ವಿರೋಧವಿಲ್ಲ ಆದರೆ ಕಬಿನಿ ಎರಡನೇ ಹಂತಕ್ಕೆ ಎಷ್ಟು ಹಣ ಈ ಸಾರಿ ಇಟ್ಟಿದ್ದೀರಿ ? ಯಾವಾಗ ಪ್ರಾರಂಭ ಮಾಡುತ್ತೀರಿ ? ಈ ಯೋಜನೆಗೆ ಮಾಜಿ ಮುಖ್ಯಮಂತ್ರಿಗಳೊಬ್ಬರು ಬಂದು ಅಡಿಗಲ್ಲು ಹಾಕಿ ಹೋಗಿದ್ದಾರೆ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ತಾರಕ ಏತ ನೀರಾವರಿ ಜೊತೆಯಲ್ಲಿಯೇ ಕಬಿನಿ ಎರಡನೇ ಯೋಜನೆ ಆಗಬೇಕು. ಮಾನ್ಯ ಮಂತ್ರಿಗಳು ಟೆಕ್ನಿಕಲ್ ಆಗಿ ಒಪ್ಪಿಕೊಂಡಿದ್ದಾರೆ. ಆದ್ದರಿಂದ ತಾರಕ ಯೋಜನೆ ಪೂರ್ತಿಯಾದರೆ ಮತ್ತಂ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸುಮಾರು ೨೮ ಸಾವಿರ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಸುಲಭವಾಗಿ ಆಗುತ್ತದೆ. ಆದರೆ ೭-೮ ತಾಲ್ಲೂಕಿನ ಜನರ ಬತ್ತಾಯ ಬಂದಿದೆ ಎಂದು ಕಬಿನಿ ಎರಡನೇ ಹಂತವನ್ನು ಮಾಡುವುದು ಸೂಕ್ತವಲ್ಲ. ತಾರಕ ಯೋಜನೆಯನ್ನು ಮತ್ತು ಕಬಿನಿ ಎರಡನೇ ಹಂತವನ್ನು ಜೊತೆ ಜೊತೆಯಲ್ಲಿಯೇ ಮಾಡಿ. ತಾರಕ ಜಲಾಶಯಂ ಪೂರ್ಣಗೊಳಿಸಿದರೆ ಸಾವಿರಾರು ಎಕರೆ ಜಮೀನಿಗೆ ನೀರು ಕೊಟ್ಟಂತೆ ಆಗುತ್ತದೆ. ಅಲ್ಲಿ ಮುಳುಗಡೆಯಾದ ಜನರಿಗೆ ಬೇರೆ ಜಮೀನು ಕೊಟ್ಟಿಲ್ಲ ಮತ್ತು ಅವರಿಗೆ ಪರಿಹಾರ ಸಹ ಕೊಟ್ಟಿಲ್ಲ. ದುಡ್ಡು ಇಲ್ಲ. ಜಮೀನು ಇಲ್ಲ. ಅಲ್ಲಿ ಫಾರೆಸ್ಟ್ ಲ್ಯಾಂಡ್‌ನ್ನು ಅಕ್ರಮಣ ಮಾಡಿಕೊಂಡಿದ್ದಾರೆ. ಸುಮಾರು ೨೫೦ ಕುಟುಂಬಗಳು ಜಮೀನು ಕಳೆದುಕೊಂಡಿವೆ. ಈ ತಾರಕ ಯೋಜನೆ ಮಾಡಿದರೆ ಸುಮಾರು ೨೮ ಸಾವಿರ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಈ ಯೋಜನೆಯನ್ನು ತಾವು ತೆಗೆದುಕೊಳ್ಳದೆ ಕಬಿನಿ ಎರಡನೇ ಹಂತವನ್ನು ಮಾಡಲು ತಾವು ರಾಜಕೀಯ ಒತ್ತಡಕ್ಕೆ ಮಣಿದಿದ್ದೀರಿ. ಚುನಾವಣೆ ಸಂದರ್ಭದಲ್ಲಿ ಅಲ್ಲಿ ಭರವಸೆ ಕೊಟ್ಟಿದ್ದೀರಿ ಎಂದು ಅದನ್ನು ತಾವು ಮಾಡುತ್ತಿದ್ದೀರಿ. ಈ ತಾರಕ ಜಲಾಶಯ ಮಾಡಿದರೆ ಸುಮಾರು ೭-೮ ತಾಲ್ಲೂಕು ಜನರಿಗೆ ಅನುಕೂಲವಾಗುತ್ತದೆ. ಅಂಥಾದ್ದನ್ನು ಮಾಡದೆ ಇದನ್ನು ಮಾಡುತ್ತಿರುವುದು ಸರಿಯೇ ? ಈ ಬಗ್ಗೆ ರಾಜಕೀಯ ನಾವು ಮಾಡುತ್ತಿದ್ದೇವೆಯೋ ನೀವು ಮಾಡುತ್ತಿದ್ದೀರೋ ಹೇಳಿ. ಆ ತಾಲ್ಲೂಕಿನ ಜನ ತಾರಕ ಯೋಜನೆ ಮೊದಲು ಮುಗಿಸಿ ಎಂದು ಕೇಳುತ್ತಿರುವುದು ನ್ಯಾಯವಲ್ಲವೇ ?

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಮುಗಿಯಲೇ ಇಲ್ಲ. ತಾರಕ ಯೋಜನೆ ಮಾಡಿ ನಮ್ಮದು ತಕರಾರು ಇಲ್ಲ. ನಾನು ಹೇಳತಕ್ಕಂಥಾದ್ದು ಏನೆಂದರೆ ಕಬಿನಿ ಎರಡನೇ ಹಂತಕ್ಕೆ ಹಿಂದಿನ ಮಾಜಿ ಮುಖ್ಯಮಂತ್ರಿಗಳು ಬಂದು ಅಡಿಗಲ್ಲು ಹಾಕಿ ಹೋಗಿದ್ದರು. ಆ ಯೋಜನೆಯನ್ನು ಈಗ ಪ್ರಾರಂಭ ಮಾಡುತ್ತೀರಿ ? ಸುಮಾರು ವರ್ಷಗಳು ಕಳೆದಿದೆ. ಈ ಯೋಜನೆಗೆ ಎಷ್ಟು ಹಣ ಒದಗಿಸಿದ್ದೀರಿ ? ಯಾವಾಗ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ದಯವಮಾಡಿ ಹೇಳಿ.

ಶ್ರೀ ಎಂ. ಪಿ. ವೆಂಕಟೇಶ್.—ತಾರಕಾ ಲಿಫ್ಟ್ ಇರಿಗೇಷನ್ ಮಾಡದಿದ್ದರೆ ನಾವು ಕಬಿನಿ ಎರಡನೇ ಹಂತದ ಯೋಜನೆ ಪ್ರಾರಂಭ ಮಾಡುವುದಕ್ಕೆಬಿಡುವುದು ಇಲ್ಲ;

ಶ್ರೀ ವಾಟಾಳ್ ನಾಗರಾಜ್.— ಏವರು ಬಿಡುವುದೇ ಇಲ್ಲ ಎಂದರೆ ಉತ್ತರ ಹೇಗೆ ಸ್ವಾಮಿ ? ತಾರಕಾ ಯೋಜನೆ ಮಾಡುವ ಬಗ್ಗೆ ನಮ್ಮ ವಿರೋಧ ಇಲ್ಲವಲ್ಲ. ಆದ್ದರಿಂದ, ದಯವಾಡಿ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡಬೇಕು.

ಶ್ರೀ ಎಂ. ಪಿ. ವೆಂಕಟೇಶ್.— ತಾರಕ ಯೋಜನೆಯನ್ನು ಮಾಡಿದ ನಂತರ ಅದನ್ನು ಮಾಡಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಅಧ್ಯಕ್ಷರೇ, ನನ್ನ ಮುಂದಿರತಕ್ಕ ಪ್ರಶ್ನೆ ತಾರಕಾ ಯೋಜನೆಗೆ ಸಂಬಂಧಪಟ್ಟ ಹಾಗೆ ಸನ್ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರು ಕಬಿನಿ ೨ನೇ ಹಂತದ ಬಗ್ಗೆ ಕೇಳುತ್ತಿದ್ದಾರೆ. ಅವರು ಈ ಬಗ್ಗೆ ಬೇರೆ ಪ್ರಶ್ನೆಯನ್ನು ಹಾಕಲಿ; ನಾನು ಉತ್ತರ ಒದಗಿಸುತ್ತೇನೆ.

ಅಧ್ಯಕ್ಷರು.— ನೀವು ಕಬಿನಿ ಬಗ್ಗೆ ಬೇರೆ ಪ್ರಶ್ನೆಯನ್ನು ಕೇಳಿ.

ಚಂಳಂಕಿನಾಲಾ ಯೋಜನೆ

೧೩೨೭ ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚುಳುಕಿನಾಲಾ ಯೋಜನೆಯ ಅಂದಾಜು ವೆಚ್ಚ ಎಷ್ಟು ;

ಆ) ಇಲ್ಲಿಯವರೆಗೆ ಖರ್ಚು ಮಾಡಲಾಗಿರುವ ಹಣವೆಷ್ಟು ;

ಇ) ಯಾವ ಯಾವ ಗ್ರಾಮಗಳ ಜಮೀನು ಈ ಯೋಜನೆಯಲ್ಲಿ ಮುಳುಗಡೆಯಾಗುವುದು (ವಿವರ ತಿಳಿಸಿ);

ಈ) ಇಲ್ಲಿಯವರೆಗೆ ಎಷ್ಟು ಜನ ಜಮೀನು ಮುಳುಗಡೆಯಾದವರಿಗೆ ಪರಿಹಾರಧನ ನೀಡಲಾಗಿದೆ (ವಿವರ ನೀಡುವುದು);

ಉ) ಧನ್ನೂರ ಗ್ರಾಮದ ಕೆಲವು ಜಮೀನು ಈ ಯೋಜನೆಯಲ್ಲಿ ಮುಳುಗಡೆಯಾಗಿದ್ದರೂ ಈವರೆಗೂ ಅವರಿಗೆ ಪರಿಹಾರ ಧನ ನೀಡದಿರಲು ಕಾರಣವೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೯೭೫–೭೬ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಅಡಳಿತಾತ್ಮಕ ಮಂಜೂರಾತಿಯಾದ ಅಂದಾಜು ಮೌಲ್ಯ ೩೮೦ ಲಕ್ಷ ರೂ.ಗಳು ಪ್ರಸ್ತುತ ದರದ ಪ್ರಕಾರ ಪರಿಷ್ಕೃತ ಅಂದಾಜು ೧೯೪೫ ಲಕ್ಷ ರೂ.ಗಳು.

ಆ) ಮಾರ್ಚ್ ೯೦ರ ಅಂತ್ಯಕ್ಕೆ ೩೯೬ ಲಕ್ಷ ರೂಪಾಯಿಗಳು.

ಇ) ಬೇಲೂರು, ಬೆಟಬಾಲಕಂದಾ, ಜಾನಾಪುರ, ಧನ್ನೂರ (ಕೆ) ಪಂಚಲಂ ಹಾಗೂ ಮುಸಾತ್ಪುರ ಆರಂ ಗ್ರಾಮಗಳ ೧೯೨೬ ಎಕರೆ ಜಮೀನು ಮುಳುಗಡೆಯಾವುದು.

ಈ) ೨೫೧ ಜನರಿಗೆ ಅನ್ವಯಿಸಿದಂತೆ ೯೯೮ ಎಕರೆ ಜಮೀನು ಮುಳುಗಡೆಯಾಗಿರುವುದಕ್ಕೆ ೫೦.೭೭ ಲಕ್ಷ ರೂ. ಪರಿಹಾರ ಧನನೀಡಲಾಗಿದೆ.

ಉ) ಆಣೆಕಟ್ಟಿನ ಕೆಲಸ ನಿರ್ಮಾಣ ಹಂತದಲ್ಲಿದೆ. ಜಲಾಶಯದ ಗರಿಷ್ಟಮಟ್ಟಹೆಚ್ಚಳ ಮಾಡಲಾಗಿರುವ ಕಾರಣ, ಹೆಚ್ಚುವರಿ ಮುಳುಗಡೆಯಾಗುವ ಧನ್ನೂರ (ಕೆ) ಗ್ರಾಮದ ಜಮೀನಿಗೆ ಪರಿಹಾರಧನ ನೀಡಬೇಕಾಗಿದೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ತಪ್ಪು ಉತ್ತರದಲ್ಲಿ ಚುಳಿಕಿನಾಲಾ ಯೋಜನೆ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ನಾನು ಕೆಲವು ವಿಚಾರಗಳನ್ನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಏನೆಂದರೆ ಚುಳಿಕಿನಾಲಾ ಆಣೆಕಟ್ಟು ಕಟ್ಟುವುದರಿಂದ ಧನ್ನೂರ ಗ್ರಾಮದ ಜಮೀನುಗಳು ಮುಳುಗಡೆಯಾಗುತ್ತವೆ. ಈ ಕೆಲಸದಿಂದ ಮುಳುಗಡೆಯಾಗುವ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಪರಿಹಾರವನ್ನು ಕೊಡಲಾಗಿದೆ. ಆದರೆ, ಇನ್ನೂ ಸ್ವಲ್ಪ ಜಮೀನು ಈ ಆಣೆಕಟ್ಟಿನಿಂದ ಮುಳುಗಡೆಯಾಗುವ ಸಂದರ್ಭ ಇರುವುದರಿಂದ